O.S. ನಂಬರಃ 45/2017

ಪಿ. ಡಬ್ಲ್ಯೂಃ 1

ದಿಃ 20-12-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ

ನಿಡಿ-1 ರಲ್ಲಿ ಈಗ ನೋಡುತ್ತಿರುವ ಭಾವಚಿತ್ರಗಳು 1 ಮತ್ತು 2 ನೇ ವಾದಿಯರದ್ದು ಇರುತ್ತದೆ. ಸದರಿ ಭಾವಚಿತ್ರಗಳನ್ನು ನಿಡಿ-1 ಸಿ ಮತ್ತು ಡಿ ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಮ್ಮ ತಾಯಿ ಹೆಸರನ್ನು ಕಡಿಮೆ ಮಾಡಿ ನಮ್ಮ ಹೆಸರು ಮಾಡಿಕೊಡುತ್ತೇನೆ ಎಂದು 1 ನೇ ಪ್ರತಿವಾದಿ ಪಡೆದಿರುತ್ತಾನೆ ಎಂದು ಹೇಳುತ್ತಾರೆ. ಸರ್ವೇ ನಂ. 142 ರಲ್ಲಿರುವ ಒಟ್ಟು 7 ಹಿಸ್ಸೆಗಳ ಕುರಿತಾಗಿ ರೆಕಾರ್ಡ ನೋಡಿದ್ದೇನೆ. ಸದರಿ ಸರ್ವೇ ನಂ. 142 ರಲ್ಲಿಯ ಹಿಸ್ಸೆಗಳು ದಿಃ 16-05-2011 ರಂದು ನಮ್ಮ ತಂದೆಯಿಂದ ನಮಗೆ ವಾರಸಾ ಆಗಿದೆ ಎಂದರೆ ಸರಿ. ಸದರಿ ಆಸ್ತಿಗಳು ವಾರಸಾ ಆದ ನಂತರ ನಾನು ಮತ್ತು ಉಳಿದ ವಾದಿಯರು ಸೊಸೈಟಿಯಲ್ಲಿ ಸಾಲ ಪಡೆದಿದ್ದೀರಿ ಎಂದರೆ ಬೆಳೆ ಸಾಲ ಪಡೆದಿದ್ದೇವೆ ಎಂದು ಹೇಳುತ್ತಾರೆ. ವಾರಸಾ ಮಾಡಿಕೊಂಡಿರುವುದು ಮತ್ತು ಬೆಳೆ ಸಾಲವನ್ನು ಪಡೆಯಲು ಬೇಕಾದ ವ್ಯವಸ್ಥೆ ನಾವೇ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ, ನಮ್ಮನ್ನು ಬಿಟ್ಟು ಬೇರೆ ಯಾರು ಮಾಡುತ್ತಾರೆ ಎಂದು ಹೇಳುತ್ತಾರೆ.

ಮೂಲ ದಾವೆ ನಂ. 89/2008 ರಲ್ಲಿ ನನ್ನ ತಾಯಿ ಪರವಾಗಿ ನಾನು ಹಾಜರಾಗಿದ್ದೆ ಎಂದು ಸಾಕ್ಷಿಗೆ ಅದರಲ್ಲಿನ ದೃಡೀಕೃತ ವಕಾಲತನಾಮೆ ತೋರಿಸಲು ನಾನು ಈ ಮೊದಲು ನ್ಯಾಯಾಲಯಕ್ಕೆ ಯಾವುದೇ ಪ್ರಕರಣದಲ್ಲಿ ಹಾಜರಾಗಿಲ್ಲ ಎಂದು ಹೇಳುತ್ತಾರೆ. ಮೂಲ ದಾವೆ ನಂ. 89/2008 ರಲ್ಲಿ ದಿಃ 20-11-2008 ರಂದು ನ್ಯಾಯಾಲಯಕ್ಕೆ ನನ್ನ ವಕಾಲತ್ ಸಲ್ಲಿಕೆಯಾಗಿದೆ ಎಂದರೆ ಆ ಕುರಿತು ಗೊತ್ತಿಲ್ಲ ಎಂದು ಹೇಳುತ್ತಾರೆ.

ಈಗ ನೋಡುತ್ತಿರುವ ದಾಖಲೆ ಮೇಲೆ ಸಹಿ ನನ್ನದಿರುತ್ತದೆ. ಸಾಕ್ಷಿ ಮುಂದುವರೆದು ವಾರಸಾ ಮಾಡಿಸಲು ಪಡೆದ ಸಹಿ ಇರುತ್ತದೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಿಡಿ-5, ಸಾಕ್ಷಿ ಸಹಿಯನ್ನು ನಿಡಿ-5 ಎ ಎಂದು ಗುರುತಿಸಲಾಯಿತು. ಸದರಿ ನಿಡಿ-5 ಕ್ಕೆ 1 ಮತ್ತು 2 ನೇ ವಾದಿಯರು ಸಹ ಹೆಬ್ಬೆಟ್ಟು ಹಾಕಿದ್ದಾರೆ ಎಂದರೆ ಸರಿ. ನಿಡಿ-5 ಸಹಿ ಮಾಡಿದ ನಂತರ ಆ ದಾಖಲೆ ಯಾರ ಬಳಿ ಇದೆ ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ, ಅವುಗಳನ್ನೆಲ್ಲಾ ಆಸ್ತಿ ವರ್ಗಾವಣೆ ಮಾಡಿಕೊಳ್ಳಲು ಬಳಸಿದ್ದಾರೆ ಎಂದು ಹೇಳುತ್ತಾರೆ. ಸರ್ವೇ 142 ರಲ್ಲಿಯ ಹಿಸ್ಸೆಗಳನ್ನು ಮ್ಯುಟೇಷನ್ ನಂ. 33/2010-11 ಮಾಡಿಕೊಳ್ಳುವಾಗ ನಿಡಿ-5 ರಂತೆ ದಾಖಲೆ ಬರೆದುಕೊಟ್ಟಿಲ್ಲ ಎಂದರೆ ಮನೆಯಲ್ಲಿ ಇರಬಹುದೆಂದು ಹೇಳುತ್ತಾರೆ.

ದಾವೆಯಲ್ಲಿ ಏನು ಬರೆದಿದೆಯೆಂದು ತಿಳಿದುಕೊಂಡಿದ್ದೀರಾ ಎಂದರೆ ನಮಗೆ ಓದು ಬರಹ ಬರುವುದಿಲ್ಲ, ಅಷ್ಟೊಂದು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಿಡಿ-1,2 ಮತ್ತು 5 ರಲ್ಲಿ ಅಂಟಿಸಿದ ನಮ್ಮ ಭಾವಚಿತ್ರಗಳನ್ನು ನಾವೇ ನೀಡಿದ್ದೇವೆ ಎಂದರೆ ಸರಿ. ಸದರಿ ದಾಖಲೆಗಳಿಗೆ ವಕೀಲರ ಕಚೇರಿಯಲ್ಲಿ ಸಹಿ ಹಾಕಿದ್ದೇವೆ ಎಂದರೆ ಸಾಕ್ಷಿ, ಒಬ್ಬರ ಮನೆಗೆ ಕರೆದುಕೊಂಡು ಹೋಗಿ ಸಹಿ ಪಡೆದಿದ್ದಾರೆ, ಅದು ಯಾರ ಮನೆಯೆಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ದಾಖಲೆಗಳಿಗೆ ಸಹಿ ಮಾಡುವ ಪೂರ್ವದಲ್ಲಿ ಓದಿ ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸದರಿ ದಾಖಲೆಗಳನ್ನು ನಮ್ಮ ಮಾಹಿತಿ ಪ್ರಕಾರ ವಕೀಲರು ತಯಾರಿಸಿದ್ದಾರೆ ಎಂದರೆ ವಾರಸಾ ಸಲುವಾಗಿ ಮಾತ್ರ ಮಾಹಿತಿ ನೀಡಿದ್ದೇವೆ ಎಂದು ಹೇಳುತ್ತಾರೆ.

1 ನೇ ಪ್ರತಿವಾದಿ ಮನೆ ಮಂಜುಗುಣಿಯಲ್ಲಿದ್ದು ನಮ್ಮ ಮನೆ ಹೊನ್ನೆಬೈಲನಲ್ಲಿದೆ ಎಂದರೆ ಸಾಕ್ಷಿ, ಒಂದೇ ರಸ್ತೆಯಲ್ಲಿರುತ್ತವೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಕೋರ್ಟ ಕಚೇರಿ ವ್ಯವಹಾರ ಮಾಡಿದ ಬಗ್ಗೆ ವ್ಯವಹಾರ ಮಾಹಿತಿ ಇಲ್ಲ, ಆದರೆ ಅವರು ವಯಸ್ಸಿನಲ್ಲಿದ್ದಾಗ ಮಾಡಿರಬಹುದು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಕೋರ್ಟ ಕಚೇರಿ ವ್ಯವಹಾರದಲ್ಲಿ ಪ್ರವೀಣರು, ಚತುರರು ಎಂದು ವಕೀಲರಿಗೆ ಹೇಳಿ ದಾವೆಯಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ, ನಮ್ಮ ಆಸ್ತಿಯನ್ನು ನಮ್ಮ ಹೆಸರಿಗೆ ಮಾಡಿಕೊಡಿ ಎಂದು ಮಾತ್ರ ಹೇಳಿದ್ದೇನೆ ಎಂದು ಹೇಳುತ್ತಾರೆ. ನಿಡಿ-1 ನ್ನು ರದ್ದು ಮಾಡಲು ದಾವೆಯಲ್ಲಿ ಮಾಗಣಿ ಮಾಡಿಲ್ಲ ಎಂದರೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ತಂದೆಗೆ

ಸಂಬಂಧಿಸಿದ ಆಸ್ತಿ ವಾರಸಾ ಮಾಡಿಕೊಳ್ಳುವಷ್ಟು ಹಾಗೂ ಸೊಸೈಟಿಗಳಲ್ಲಿ ಸಾಲ ಪಡೆಯುವಷ್ಟು ವ್ಯವಹಾರ ಚತುರಳಿದ್ದೇನೆ ಎಂದರೆ ಸರಿಯಲ್ಲ. ಹಣ ಪಡೆದು ದಾಖಲೆ ಬರೆದುಕೊಟ್ಟರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ಸಾಕ್ಷಿದಾರರ ಸಮಕ್ಷಮ ಪಡೆದು ನಿಡಿ–5 ದಾಖಲೆ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

ಜಮೀನುಗಳ ವಾರಸಾವನ್ನು 1 ನೇ ಪ್ರತಿವಾದಿ ಮಾಡಿಕೊಡುವಂತಹ ವ್ಯಕ್ತಿಯೇ ಅಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನುಗಳ ವಾರಸಾ ಮಾಡಿಕೊಡಬೇಕೆಂದು 1 ನೇ ಪ್ರತಿವಾದಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಗೌರವ ತೇಜೋವಧೆ ಮಾಡುವ ರೀತಿಯಲ್ಲಿ ದಾವೆಯಲ್ಲಿ ಬರೆಸಿದ್ದೇವೆ ಎಂದರೆ ಸರಿಯಲ್ಲ. ವಕೀಲರ ಕಚೇರಿಯಲ್ಲಿ ನಾವು ದಾಖಲೆಗಳನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.